ಬೆಂಗಳೂರು ಬಳಿ ವಿಜ್ಞಾನ ಪಾರ್ಕ್ ನಿರ್ಮಿಸುವ ಬಗ್ಗೆ

209 (135) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಬಳಿ ವಿಜ್ಞಾನ ಪಾರ್ಕ್ ನಿರ್ಮಿಸಲು ಸರ್ಕಾರ ನೀಡಿದ್ದ ಭೂಮಿಯ ವಿಸ್ತೀರ್ಣ ಎಷ್ಟು;

ಆ) ಈ ಜಾಗದಲ್ಲಿ ಒತ್ತುವರಿಯಾಗಿದ್ದು, ಈ ಉದ್ದೇಶಿತ ವಿಜ್ಞಾನ ಪಾರ್ಕ್‌ಗಾಗಿ ಬೇರೆ ಸ್ಥಳವನ್ನು ಗುರುತಿಸಲಾಗಿದೆಯೆ;

ಇ) ಹಾಗಿದ್ದಲ್ಲಿ, ಅದರ ಪೂರ್ಣ ವಿವರ ನೀಡುವುದು;

ಈ) ಇದಕ್ಕಾಗಿ 2002–03 ಹಾಗೂ 2003–04ರಲ್ಲಿ ಮೀಸಲಾಗಿಟ್ಟಿದ್ದ ಹಣವೆಷ್ಟು;

ಉ) ಈ ವಿಜ್ಞಾನ ಪಾರ್ಕ್‌ಗಾಗಿ ಪ್ರತ್ಯೇಕ ಸೊಸೈಟಿಯನ್ನು ನೋಂದಾಯಿಸಲಾಗಿದೆಯೆ;

ಊ) ಹಾಗಿದ್ದಲ್ಲಿ, ಅದರ ಸದಸ್ಯರುಗಳ ವಿವರಗಳನ್ನು ನೀಡುವುದು;

ಋ) ಈ ಉದ್ದೇಶಿತ ವಿಜ್ಞಾನ ಪಾರ್ಕ್‌ನ ಅಂದಾಜು ವೆಚ್ಚವೆಷ್ಟು; ಇದರಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಪಾಲು ಎಷ್ಟು;

ೠ) ಇದಕ್ಕಾಗಿ ಹಣ ನೀಡಲು ಕೇಂದ್ರ ಸರ್ಕಾರ ಭರವಸೆ ನೀಡಿದೆಯೆ;

ಎ) ಈ ಉದ್ದೇಶಿತ ವಿಜ್ಞಾನ ಪಾರ್ಕ್‌ನ ರೂಪು ರೇಷೆಗಳೇನು;

ಏ) ಇದು ಯಾವಾಗ ಕಾರ್ಯಾರಂಭಗೊಳ್ಳುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) 100 ಎಕರೆ ವಿಸ್ತೀರ್ಣ

ಆ) ಗುರುತಿಸಲಾಗಿದೆ.

ಇ) ಈ ಹಿಂದೆ ಹೆಸರಘಟ್ಟ ಗ್ರಾಮದ ಬಳಿ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆಯಾಗಿದ್ದ 347 ಎಕರೆ ಜಮೀನಿನ ಪೈಕಿ 100 ಎಕರೆ ಜಮೀನನ್ನು ಈ ಇಲಾಖೆಗೆ ನೀಡಲು ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಗೆ ಕೋರಲಾಗಿದೆ.

ಈ) 2002–03ನೇ ಸಾಲಿನಲ್ಲಿ 15.00 ಲಕ್ಷ ರೂ.ಗಳು ಹಾಗೂ 2003–04ನೇ ಸಾಲಿನಲ್ಲಿ 10.00 ಲಕ್ಷ ರೂ.ಗಳು.

ಉ) ನೋಂದಾಯಿಸಿರುವುದಿಲ್ಲ.

ಊ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಋ) ಅಂದಾಜು ವೆಚ್ಚ 70.00 ಕೋಟಿ ರೂ.ಗಳು ಇದರಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪಾಲು ತಲಾ ಶೇ. 13ರಷ್ಟು ಇರುವುದು.

ೠ) ಹೌದು.

ಎ) ಈ ಯೋಜನೆಯ ಮುಖ್ಯ ಉದ್ದೇಶ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನ ಸಾಮಾನ್ಯರಲ್ಲಿ ಜನಪ್ರಿಯಗೊಳಿಸಲು ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಜಾಗೃತಗೊಳಿಸುವುದಾಗಿರುತ್ತದೆ. ಈ ವಿಜ್ಞಾನ ಪಾರ್ಕ್‌ನಲ್ಲಿ ಬಾಹ್ಯಾಕಾಶ ವಸ್ತು ಸಂಗ್ರಹಾಲಯ, ವಿಜ್ಞಾನ ವಸ್ತು ಸಂಗ್ರಹಾಲಯ ಆಡಿಟೋರಿಯಂ, ಪರಿಸರ ಪಾರ್ಕ್, ಕಂಪ್ಯೂಟರ್ ಸೆಂಟರ್, ಪಾಟರ್ ಅಮ್ಯೂಸ್‌ಮೆಂಟ್‌ಪಾರ್ಕ್, ಹೊರಾಂಗಣ ವಿಜ್ಞಾನ ಪಾರ್ಕ್, ವಿಜ್ಞಾನ ವಸ್ತು ಪ್ರದರ್ಶನ, ಜೈವಿಕ ವೈವಿಧ್ಯತೆ ಪಾರ್ಕ್, ಐಮ್ಯಾಕ್ಸ್ ಚಿತ್ರದ ಪ್ರದರ್ಶನಾಲಯ ಇತ್ಯಾದಿ ಪೂರಕ ಪರಿಕಾರಗಳು ಒಳಗೊಂಡಿರುತ್ತವೆ.

ಏ) ಈ ಯೋಜನೆಗೆ ಪ್ರಸ್ತಾಪಿಸಿರುವ ಜಮೀನು ಈ ಇಲಾಖೆಗೆ ವರ್ಗಾವಣೆಯಾದ ನಂತರ ಮತ್ತು ಸಚಿವ ಸಂಪುಟದ ಅನುಮೋದನೆಯ ನಂತರ ಪ್ರಾರಂಭಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ಮುಜರಾಯಿ ದೇವಸ್ಥಾನಗಳ ಆಸ್ತಿ ಮಾರಾಟ

211 (138) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳೆಷ್ಟು;

ಆ) ಈ ದೇವಸ್ಥಾನಗಳಿಗೆ ಸೇರಿದ ಭೂಮಿ ಎಷ್ಟು;

ಇ) ಇವುಗಳ ಪೈಕಿ ಎಷ್ಟು ಪ್ರದೇಶವನ್ನು ಪರಭಾರೆ ಮಾಡಲಾಗಿದೆ;

ಈ) ಎಷ್ಟು ಪ್ರದೇಶವನ್ನು ಗುತ್ತಿಗೆಗೆ ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳಿಗೆ ನೀಡಲಾಗಿದೆ;

ಉ) ಪ್ರತಿಯೊಂದು ಸಂಸ್ಥೆಗೆ ಯಾವ ದರದಲ್ಲಿ ಗುತ್ತಿಗೆಗೆ ನೀಡಲಾಗಿದೆ;

ಊ) ಗುತ್ತಿಗೆಗೆ ಪಡೆದಂಥ ಸಂಸ್ಥೆಗಳು ವಾಣಿಜ್ಯೋದ್ಯಮ ಕಟ್ಟಡಗಳನ್ನು ನಿರ್ಮಿಸಿ ಆಂಗ್ಲ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಸರ್ಕಾರ ಈ ಗುತ್ತಿಗೆ ದರವನ್ನು ಪುನರ್ ವಿಮರ್ಶಿಸಲು ನಿರ್ಧರಿಸಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರ ನಗರಸಭಾ ವ್ಯಾಪ್ತಿಯಲ್ಲಿ ಒಟ್ಟು 52 ಅಧಿಸೂಚಿತ ಸಂಸ್ಥೆಗಳು ಈ ಇಲಾಖೆಯ ವ್ಯಾಪ್ತಿಗೆ ಬರುತ್ತವೆ.

ಆ) ಈ ದೇವಾಲಯಗಳಿಗೆ (ದೇವಸ್ಥಾನ ಹೊರತುಪಡಿಸಿ) ಒಟ್ಟು 183541.58 ಚದರ ಮೀಟರ್ ವಿಸ್ತೀರ್ಣ ಭೂಮಿ ಇದೆ.

ಇ) ಈ ಜಮೀನಿನ ಪೈಕಿ 1438.896 ಚದರ ಮೀಟರ್ ವಿಸ್ತೀರ್ಣದ ಜಾಗವನ್ನು ಪರಭಾರೆ ಮಾಡಲಾಗಿದೆ.

ಈ) ಶಿಕ್ಷಣ ಸಂಸ್ಥೆಗಳಿಗಾಗಿ 7479.064 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

ಉ) ಸರ್ಕಾರದ ಗುತ್ತಿಗೆ ಮಾರ್ಗಸೂಚಿ ಆದೇಶ ಸಂ. ಕಂಇ/66/ಮುಆಬಿ/99, ದಿನಾಂಕ 11-4-2001 ಮತ್ತು 1-8-2001ರಲ್ಲಿ ನಿಗಧಿಪಡಿಸಿರುವ ವಾಣಿಜ್ಯ ಮತ್ತು ವಾಣಿಜ್ಯೇತರ ಉದ್ದೇಶಗಳಿಗಾಗಿ ನಿಯಮಾನುಸಾರ ಗುತ್ತಿಗೆಗೆ ನೀಡಲಾಗಿದೆ. ದಿನಾಂಕ 1-5-2003ರಿಂದ ಜಾರಿಗೆ ಬಂದಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮ 2002ರಡಿ ವಿಧಿಸಿರುವ ಷರತ್ತಿನಂತೆ ಇನ್ನು ಮುಂದೆ ಬಹಿರಂಗ ಹರಾಜು ಮೂಲಕ ಬಾಡಿಗೆ ಆಧಾರದ ಮೇಲೆ ಗುತ್ತಿಗೆಗೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಊ) ಬಂದಿರುವುದಿಲ್ಲ.

ಋ) ಇಲ್ಲ.

ರಾಜ್ಯದಲ್ಲಿ ರೆವಿನ್ಯೂ ಸ್ಟ್ಯಾಂಪುಗಳ ಕೊರತೆ

212 (140) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಂದು ರೂ. ಮೌಲ್ಯದ ರೆವಿನ್ಯೂ ಸ್ಟ್ಯಾಂಪುಗಳು ಅಂಚೆ ಕಛೇರಿಗಳಲ್ಲಿ ಲಭ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;